ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ ನ್ಯಾಯಾಲಯ, ಔರಾದ.

ಎಮ್.ವಿ.ಸಿ. ನಂ. 489/2023

RW-1

ಸಾಕ್ಷಿಯನ್ನು ವಾಟ್ಸ ಆಪ್ ಸಹಾಯದ ಮೂಲಕ ಅಂತರ್ಜಾಲದಿಂದ ವರ್ಚುವಲ್ ಆಧಾರದ ಮೇಲೆ ಸಾಕ್ಷಿಯ ಹೇಳಿಕೆಯನ್ನು ಪಡೆಯಲಾಯಿತು.
ಸಾಕ್ಷಿಯನ್ನು ದಿ. 8.7.2026 ರಂದು ಅಂತರ್ಜಾಲದ ಮೂಲಕ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರು | ಸಾಜೀದ್ ಅಹಮದ್ ದೊಡ್ಡಮನಿ |
| ತಂದೆಯ ಹೆಸರು | ಟಿಪ್ಪು ಸುಲ್ತಾನ ದೊಡ್ಡಮನಿ |
| ವಯಸ್ಸು | 28 ವರ್ಷ |
| ಉದ್ಯೋಗ | ಅಸಿಸ್ಟೆಂಟ್ ಮ್ಯಾನೇಜರ್ ಲೀಗಲ್, ಚೋಳಾ ಮಂಡಲಮ್ ಎಮ್.ಎಸ್. ಜನರಲ್ ಇನ್ಸೂರೆನ್ಸ ಕಂಪನಿ ಲಿ., ಹುಬ್ಬಳ್ಳಿ |
| ವಾಸಸ್ಥಳ | ಹುಬ್ಬಳ್ಳಿ |

**ಮುಖ್ಯ ವಿಚಾರಣೆಃ ಎದುರುದಾರ ನಂ. 2 ರವರ ಪರ ಶ್ರೀ. ಪಿ.ವಿ.ಎಮ್. ವಕೀಲರಿಂದಃ**

ನಾನು ಸುಮಾರು 1-ವರೆ ವರ್ಷದಿಂದ ಅಸಿಸ್ಟೆಂಟ್ ಮ್ಯಾನೇಜರ್ ಲೀಗಲ್ ಎಂದು ಚೋಳಾ ಮಂಡಲಮ್ ಎಮ್.ಎಸ್. ಜನರಲ್ ಇನ್ಸೂರೆನ್ಸ ಕಂಪನಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ವಿಮಾ ಪಾಲಿಸಿಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್.-1 ಎಂದು ಗುರುತಿಸಲಾಯಿತು.

ಈ ಪ್ರಕರಣದಲ್ಲಿಯ ಮೋಟರ ಸೈಕಲ ಸಂಖ್ಯೆ ಕೆ.ಎ. 38 ಎಕ್ಸ 9434 ನೇದ್ದಕ್ಕೆ ನಮ್ಮ ಕಂಪನಿಯಿಂದ ದಿ. 5.6.2021 ರಿಂದ ದಿ. 4.6.2026 ರವರೆಗೆ ವಿಮಾ ಪಾಲಿಸಿಯನ್ನು ನೀಡಲಾಗಿದೆ. ಈ ಪ್ರಕರಣದಲ್ಲಿ ಮೋಟರ ಸೈಕಲ ಸಂಖ್ಯೆ ಕೆ.ಎ. 38 ಎಕ್ಸ 9434 ನೇದಕ್ಕೆ ಚಾಲಕನ ಹತ್ತಿರ ಚಾಲನೆ ಲೈಸನ್ಸ ಇರಲಿಲ್ಲ. ಈ ದೋಷಾರೋಪಣೆ ಪಟ್ಟಿಯಲ್ಲಿ ಎಲ್ಲಿಯೂ ಕೂಡ ಮೇಲೆ ಹೇಳಿದ ಮೊಟರ ಸೈಕಲ ಮತ್ತು ಮೃತ ಸವಾರನಾದ ಮೋಟರ ಸೈಕಲ ಸಂಖ್ಯೆ ಟಿ.ಎಸ್. 16 ಇ. ಯು4206 ನೇದವುಗಳ ಮಧ್ಯೆ ಡಿಕ್ಕಿ ನಡೆದಿಲ್ಲ ಮತ್ತು ವಾಹನಗಳು

ಒಂದಕೊಂದು ಟಚ ಆಗಿಲ್ಲ. ಎಮ್.ವಿ. ವರದಿ ಪ್ರಕಾರ 2 ವಾಹನಗಳಿಗೆ ಜಕಂ ಆಗಿರುವುದಿಲ್ಲ. ಸದರಿ ಅಪಘಾತವು ಮೃತನು ಪ್ರಯಾಣಿಸುತ್ತಿದ್ದ ಮೋಟರ ಸೈಕಲ ಚಾಲಕನ ನಿರ್ಲಕ್ಷ್ಯತನದಿಂದ ಆಗಿರುತ್ತದೆ. ಪರಿಹಾರ ಪಡೆಯುವ ಸಲುವಾಗಿ ನಮ್ಮ ಕಂಪನಿಂದ ವಿಮೆ ಮಾಡಲಾದ ವಾಹನದ ಮೇಲೆ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಕೇಸ್ ದಾಖಲಿಸಲಾಗಿದೆ. ಆದ್ದರಿಂದ ನಮ್ಮ ವಿಮಾ ಕಂಪಿನಿಯು ಯಾವುದೇ ಪರಿಹಾರ ಕೊಡಲು ಬಾಧ್ಯತೆ ಹೊಂದಿಲ್ಲ.

**ಪಾಟೀ ಸವಾಲು: ಅರ್ಜಿದಾರರ ಪರ ಶ್ರಿ. ಆರ್. ಎ. ಎನ್. ವಕೀಲರಿಂದಃ**

ಈ ಪ್ರಕರಣಕ್ಕೆ ಸಂಭಂದ ಪಟ್ಟ ಎಲ್ಲಾ ದಾಖಲೆಯನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ಪೋಲಿಸ್ ದಾಖಲೆಗಳ ಪ್ರಕಾರ 2 ಮೋಟರ ಸೈಕಲ ಸವಾರರ ನಿರಲಕ್ಷ್ಯತನ ಅಪಘಾತಕ್ಕೆ ಕಾರಣ ಎಂದು ತೋರಿಸಲಾಗಿದೆ ಎಂದರೆ ನಿಜ. ಔರಾದ ಬೀದರ ರಸ್ತೆ ರಾಷ್ಟ್ರೀಯ ಹೆದ್ದಾರಿ ಇರುತ್ತದೆ ಎಂದರೆ ಸರಿಯಲ್ಲ. ಅಪಘಾತ ದಿನ ಮೋಟರ ಸೈಕಲ ನಂ. ಟ.ಎಸ್. 16 ಇ.ಯು. 4206 ನೇದರ ಚಾಲಕ ರಸ್ತೆ ಎಡಬದಿಗೆ ಹೊರಟಿದ ಎಂದರೆ ಸರಿಯಲ್ಲ. ಮೋಟರ ಸೈಕಲ ನಂ. ಕೆ.38 ಎಕ್ಸ 9434 ನೇದರ ಚಾಲಕ ರಸ್ತೆಯ ತಪ್ಪು ಬದಿಗೆ ಎಂದರೆ ತೀರ ಬಲ ಬದಿಗೆ ಬಂದಿತ್ತು ಎಂದರೆ ಸರಿಯಲ್ಲ. ದೋಷಾರೋಪಣೆ ಪಟ್ಟಿಯಈ ಮೇಲೆ ಹೇಳಿದಂತೆ ಮೊಟರ ಸೈಕಲ ನಂ. ನಮ್ಮ ವಿಮಾ ಕಂಪನಿಯಿಂದ ಎಲ್ಲಿಯೂ ಚಾಲೆಂಜ ಮಾಡಿಲ್ಲ ಏಕೆಂದರೆ ಮೋಟರ ಸೈಕಲ ನಂ. ಕೆ.38 ಎಕ್ಸ 9434 ನೇದ್ದರ ಚಾಲಕ ತೀರ ಬಲಬದಿಗೆ ಬಂದು ಅಪಘಾತವಾಗಿದೆ ಎಂದು ಬರೆದಿರುವ ಬಗ್ಗೆ ದೋಷಾರಪಣೆ ಪಟ್ಟಿಯನ್ನು ನಮ್ಮ ವಿಮಾಕಂಪನಿ ಚಾಲೆಂಜ ಮಾಡಿಲ್ಲ ಏಕೆಂದರೆ ಅದಕ್ಕೆ ನಾವು ಪಕ್ಷಗಾರರು ಇರುವುದಿಲ್ಲ. ಈ ಪ್ರಕರಣದಲ್ಲಿ ಮೋಟರ ಸೈಕಲ ನಂ. ಕೆ.38 ಎಕ್ಸ 9434 ನೇದ್ದರ ಚಾಲಕನೊಬ್ಬನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಪರಿಹಾರ ಕೊಡಬೇಕಾಗುತ್ತದೆ ಎಂದು ಹೇಳಿ ಅದರಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳದಂತೆ ಮೋಟರ ಸೈಕಲ ನಂ. ಕೆ.38 ಎಕ್ಸ 9434 ಚಾಲಕನ ಹತ್ತಿರ ಲೈಸನ್ಸ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಶ್ರೀ ಎಸ್.ಬಿ.ಎಮ್. ಎದುರುಗಾರ ನಂ.೩ ರ ಪರ ವಕೀಲರು ಪಾಟಿ ಸವಾಲಿಗೆ ಪರವಾಣಿಗೆ ಕೋರಿದ್ದು ನೀಡಲಾಯಿತು.**

**ಪಾಟಿಸವಾಲು : ಎದುರುಗಾರ ನಂ. 3 ರ ಪರ ಶ್ರೀ ಎಸ್. ಬಿ. ಎಮ್. ವಕೀಲರಿಂದ:**

ಅಪಘಾತದ ದಿನ ಎದುರುದಾರ ನಂ.3 ರ ಪರ ವಾಹಣ ಸಂಖ್ಯೆ ಟಿಎಸ್.16 ಇ ಯು 4206 ನೇದ್ದಕ್ಕೆ ಸಂಬಂಧಿಸಿದಂತೆ ವಿಮೆ ಇತ್ತು ಮತ್ತು ಆತನ ಬಳಿ ಲೈಸನ್ಸ ಇತ್ತು ಎಂದರೆ ಸರಿಯಲ್ಲ. ಅಪಘಾತದಲ್ಲಿ ಎದುರುದಾರ ನಂ. 3 ರ ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ದೋಷಾರೋಪಣೆ ಪಟ್ಟಿಯನ್ನು ತನಿಖಾಧಿಕಾರಿಯು ಸಂಪೂರ್ಣ ತನಿಖೆ ಮಾಡಿದ ನಂತರ ದಾಖಲಿಸಿದ್ದಾರೆ ಎಂದರೆ ಮೋಟರ ಸೈಕಲ ನಂ. ಕೆಎ 38 ಎಕ್ಸ 9434 ವಾಹನ ಮೇಲೆ ಸುಳ್ಳು ಕೇಸ ಹಾಕಿದ್ದಾರೆ ಎನ್ನುತ್ತಾರೆ. ಅಪಘಾತವು ಮೋಟರ ಸೈಕಲ ನಂ. ಕೆಎ 38 ಎಕ್ಸ 9434 ನೇದ್ದರ ಚಾಲಕ ಒಬ್ಬನ ತಪ್ಪಿನಿಂದ ಮಾತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ವಿಮೆ ಕೊಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತ ಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ ಮೇಲೆ ಟೈಪ್/ಪ್ರಿಂಟ ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಔರಾದ.